# ಜ್ಞಾನೋಕ್ತಿಗಳು ಮತ್ತು ಕೀರ್ತನೆಗಳಲ್ಲಿ ನೀತಿವಂತ ಗ್ರಂಥಗಳ ಆಶೀರ್ವಾದಗಳು

ಆತನು ಯಥಾರ್ಥರಿಗೆ ಜ್ಞಾನವನ್ನು ಭದ್ರಪಡಿಸಿಡುತ್ತಾನೆ; ನಿರ್ದೋಷವಾಗಿ ನಡೆಯುವವರಿಗೆ ಆತನು ಗುರಾಣಿಯಾಗಿದ್ದಾನೆ. **(ಜ್ಞಾನೋಕ್ತಿ 2:7)**

ಕುಟಿಲಚಿತ್ತನು ಯೆಹೋವನಿಗೆ ಅಸಹ್ಯನು; ಆದರೆ ಆತನ ರಹಸ್ಯವು ನೀತಿವಂತರ ಸಂಗಡ ಇರುತ್ತದೆ. **(ಜ್ಞಾನೋಕ್ತಿ** 3:32**)**

ದುಷ್ಟರ ಮನೆಯ ಮೇಲೆ ಯೆಹೋವನ ಶಾಪವಿರುತ್ತದೆ; ಆದರೆ ನೀತಿವಂತರ ಮನೆಯನ್ನು ಆತನು ಆಶೀರ್ವದಿಸುತ್ತಾನೆ. **(ಜ್ಞಾನೋಕ್ತಿ** 3:33**)**

ನೀತಿವಂತರ ಮಾರ್ಗವು ನಡುಹಗಲಿನ ತನಕ ಹೆಚ್ಚು ಹೆಚ್ಚು ಪ್ರಕಾಶಿಸುವ ಉದಯದ ಬೆಳಕಿನ ಹಾಗಿದೆ. **(ಜ್ಞಾನೋಕ್ತಿ** 4:18**)**

ಜ್ಞಾನಿಗೆ ಬೋಧಿಸು, ಅವನು ಇನ್ನೂ ಹೆಚ್ಚಾಗಿ ಜ್ಞಾನ ಹೊಂದುವನು; ನೀತಿವಂತನಿಗೆ ಉಪದೇಶಿಸು, ಅವನು ತನ್ನ ವಿದ್ಯೆಯನ್ನು ಹೆಚ್ಚಿಸಿಕೊಳ್ಳುವನು. **(ಜ್ಞಾನೋಕ್ತಿ** 9:9**)**

ಯೆಹೋವನು ನೀತಿವಂತನ ಪ್ರಾಣಕ್ಕೆ ಹಸಿವೆಯಾಗಗೊಡಿಸನು; ಆದರೆ ದುಷ್ಟರ ಅಪೇಕ್ಷೆಯನ್ನು ಆತನು ತಳ್ಳಿಬಿಡುವನು. **(ಜ್ಞಾನೋಕ್ತಿ** 10:3**)**

ನೀತಿವಂತರ ತಲೆಯ ಮೇಲೆ ಆಶೀರ್ವಾದಗಳಿವೆ; ಆದರೆ ದುಷ್ಟರ ಬಾಯಿ ಹಿಂಸೆಯನ್ನು ಮುಚ್ಚಿಕೊಳ್ಳುವುದು. **(ಜ್ಞಾನೋಕ್ತಿ** 10:6**)**

ನೀತಿವಂತನ ಜ್ಞಾಪಕವು ಆಶೀರ್ವಾದಕರವಾಗಿದೆ; ಆದರೆ ದುಷ್ಟರ ಹೆಸರು ಕೊಳೆಯುವುದು. **(ಜ್ಞಾನೋಕ್ತಿ** 10:7**)**

ನೀತಿವಂತನ ಬಾಯಿ ಜೀವದ ಬುಗ್ಗೆಯಾಗಿದೆ; ಆದರೆ ದುಷ್ಟರ ಬಾಯಿ ಹಿಂಸೆಯನ್ನು ಮುಚ್ಚಿಕೊಳ್ಳುವುದು. **(ಜ್ಞಾನೋಕ್ತಿ** 10:11**)**

ನೀತಿವಂತನ ದುಡಿಮೆಯು ಜೀವಕ್ಕೆ ಕಾರಣವಾಗುವುದು; ದುಷ್ಟನ ಸಂಪಾದನೆಯು ಪಾಪಕ್ಕೆ ಕಾರಣವಾಗುವುದು. **(ಜ್ಞಾನೋಕ್ತಿ** 10:16**)**

ನೀತಿವಂತನ ನಾಲಿಗೆಯು ಶ್ರೇಷ್ಠವಾದ ಬೆಳ್ಳಿಯ ಹಾಗಿದೆ; ದುಷ್ಟರ ಹೃದಯವು ಅಲ್ಪ ಬೆಲೆಯದ್ದು. **(ಜ್ಞಾನೋಕ್ತಿ** 10:20**)**

ನೀತಿವಂತನ ತುಟಿಗಳು ಅನೇಕರಿಗೆ ಉಪದೇಶಿಸುತ್ತವೆ; ಆದರೆ ಮೂರ್ಖರು ಬುದ್ಧಿಯಿಲ್ಲದೆ ಸಾಯುವರು. **(ಜ್ಞಾನೋಕ್ತಿ** 10:21**)**

ದುಷ್ಟನಿಗೆ ಹೆದರುವಿಕೆಯು ಸಂಭವಿಸುವುದು; ಆದರೆ ನೀತಿವಂತರ ಅಪೇಕ್ಷೆಯು ಕೈಗೂಡುವುದು. **(ಜ್ಞಾನೋಕ್ತಿ** 10:24**)**

ಸುಳಿಗಾಳಿಯು ಹಾದುಹೋದರೆ ದುಷ್ಟನು ಇಲ್ಲವಾಗುವನು; ಆದರೆ ನೀತಿವಂತನು ಶಾಶ್ವತವಾದ ಅಸ್ತಿವಾರವುಳ್ಳವನು. **(ಜ್ಞಾನೋಕ್ತಿ** 10:25**)**

ನೀತಿವಂತರ ನಿರೀಕ್ಷೆಯು ಆನಂದವಾಗಿರುತ್ತದೆ; ಆದರೆ ದುಷ್ಟರ ಆಶೆಯು ನಾಶವಾಗುವುದು. **(ಜ್ಞಾನೋಕ್ತಿ** 10:28**)**

ಯೆಹೋವನ ಮಾರ್ಗವು ಯಥಾರ್ಥವಾದವರಿಗೆ ಬಲವಾಗಿದೆ; ಆದರೆ ದುಷ್ಟರಿಗೆ ಅದು ನಾಶನವಾಗಿದೆ. **(ಜ್ಞಾನೋಕ್ತಿ** 10:29**)**

ನೀತಿವಂತನು ಎಂದಿಗೂ ಕದಲಿಸಲ್ಪಡುವುದಿಲ್ಲ; ಆದರೆ ದುಷ್ಟರು ದೇಶದಲ್ಲಿ ವಾಸವಾಗಿರುವುದಿಲ್ಲ. **(ಜ್ಞಾನೋಕ್ತಿ** 10:30**)**

ನೀತಿವಂತನ ಬಾಯಿಂದ ಜ್ಞಾನವು ಚಿಮ್ಮುವುದು; ಆದರೆ ವಕ್ರವಾದ ನಾಲಿಗೆಯು ಕತ್ತರಿಸಲ್ಪಡುವುದು. **(ಜ್ಞಾನೋಕ್ತಿ** 10:31**)**

ನೀತಿವಂತನ ತುಟಿಗಳಿಗೆ ಒಪ್ಪುವ ಮಾತುಗಳು ತಿಳಿದಿವೆ; ಆದರೆ ದುಷ್ಟರ ಬಾಯಿಂದ ವಕ್ರವಾದ ಮಾತುಗಳು ಬರುತ್ತವೆ. **(ಜ್ಞಾನೋಕ್ತಿ** 10:32 **)**

ಯಥಾರ್ಥರ ಯೋಗ್ಯತೆಯು ಅವರನ್ನು ನಡಿಸುವುದು; ದ್ರೋಹಿಗಳ ವಕ್ರತೆಯು ಅವರನ್ನು ಹಾಳುಮಾಡುವುದು. **(ಜ್ಞಾನೋಕ್ತಿ** 11:3**)**

ನೀತಿವಂತರು ಅಭಿವೃದ್ಧಿಯಾಗುವಾಗ ಪಟ್ಟಣವು ಉಲ್ಲಾಸಗೊಳ್ಳುವುದು; ದುಷ್ಟರು ನಾಶವಾಗುವಾಗ ಉತ್ಸವವಿರುವುದು. **(ಜ್ಞಾನೋಕ್ತಿ** 11:10**)**

ನೀತಿವಂತರ ಅಪೇಕ್ಷೆಯು ಕೇವಲ ಒಳ್ಳೆಯದು; ದುಷ್ಟರ ನಿರೀಕ್ಷೆಯು ಕೋಪವಾಗಿದೆ. **(ಜ್ಞಾನೋಕ್ತಿ 11:23)**

ತನ್ನ ಐಶ್ವರ್ಯವನ್ನು ನಂಬಿಕೊಳ್ಳುವವನು ಬೀಳುವನು; ಆದರೆ ನೀತಿವಂತರು ಚಿಗುರೆಲೆಯಂತೆ ಹಸುರಾಗಿರುವರು. **(ಜ್ಞಾನೋಕ್ತಿ** 11:28**)**

ನೀತಿವಂತನ ಫಲವು ಜೀವದ ವೃಕ್ಷವಾಗಿದೆ; ಆತ್ಮಗಳನ್ನು ಗೆಲ್ಲುವವನು ಜ್ಞಾನಿಯು. **(ಜ್ಞಾನೋಕ್ತಿ** 11:30**)**

ಇಗೋ, ನೀತಿವಂತನಿಗೆ ಭೂಮಿಯ ಮೇಲೆಯೇ ಪ್ರತಿಫಲ ಸಿಕ್ಕುವಾಗ, ದುಷ್ಟನಿಗೂ ಪಾಪಿಗೂ ಎಷ್ಟು ಹೆಚ್ಚಾಗಿ ಸಿಕ್ಕಬೇಕು! **(ಜ್ಞಾನೋಕ್ತಿ** 11:31)

ಮನುಷ್ಯನು ದುಷ್ಟತನದಿಂದ ಸ್ಥಿರಪಡುವುದಿಲ್ಲ; ಆದರೆ ನೀತಿವಂತರ ಬೇರು ಕದಲಿಸಲ್ಪಡುವುದಿಲ್ಲ. **(ಜ್ಞಾನೋಕ್ತಿ** 12:3)

ದುಷ್ಟರು ಉರುಳಿಹೋಗಿ ಇಲ್ಲವಾಗುವರು; ಆದರೆ ನೀತಿವಂತರ ಮನೆ ನಿಲ್ಲುವುದು. **(ಜ್ಞಾನೋಕ್ತಿ** 12:7)

ದುಷ್ಟನು ತುಟಿಗಳ ದ್ರೋಹದಿಂದ ಸಿಕ್ಕಿಕೊಳ್ಳುವನು; ಆದರೆ ನೀತಿವಂತನು ಕಷ್ಟದಿಂದ ಬಿಡುಗಡೆಯಾಗುವನು. **(ಜ್ಞಾನೋಕ್ತಿ** 12:13)

ನೀತಿವಂತನಿಗೆ ಯಾವ ಕೇಡೂ ಸಂಭವಿಸುವುದಿಲ್ಲ; ಆದರೆ ದುಷ್ಟರು ಕೇಡಿನಿಂದ ತುಂಬಿರುವರು. **(ಜ್ಞಾನೋಕ್ತಿ** 12:21)

ನೀತಿವಂತನು ತನ್ನ ನೆರೆಯವನಿಗಿಂತ ಉತ್ತಮವಾದ ಮಾರ್ಗವನ್ನು ತೋರಿಸುವನು; ಆದರೆ ದುಷ್ಟರ ಮಾರ್ಗವು ಅವರನ್ನು ತಪ್ಪಿಸುವುದು. **(ಜ್ಞಾನೋಕ್ತಿ** 12:26)

ಪಾಪಿಗಳನ್ನು ಕೇಡು ಹಿಂಬಾಲಿಸುವುದು; ಆದರೆ ನೀತಿವಂತರಿಗೆ ಒಳ್ಳೆಯದು ಪ್ರತಿಫಲವಾಗಿ ಸಿಕ್ಕುವುದು. **(ಜ್ಞಾನೋಕ್ತಿ** 13:21)

ನೀತಿವಂತನು ತನ್ನ ಹೊಟ್ಟೆ ತುಂಬುವಷ್ಟು ತಿನ್ನುವನು; ಆದರೆ ದುಷ್ಟರ ಹೊಟ್ಟೆಗೆ ಆಹಾರವಿರುವುದಿಲ್ಲ. **(ಜ್ಞಾನೋಕ್ತಿ** 13:25)

ದುಷ್ಟರ ಮನೆಯು ನಾಶವಾಗುವುದು; ಆದರೆ ಯಥಾರ್ಥರ ಗುಡಾರವು ಅಭಿವೃದ್ಧಿಯಾಗುವುದು. **(ಜ್ಞಾನೋಕ್ತಿ** 14:11)

ದುಷ್ಟನು ತನ್ನ ಕೆಡುಕಿನಲ್ಲಿಯೇ ತಳ್ಳಲ್ಪಡುವನು; ಆದರೆ ನೀತಿವಂತನು ಮರಣದಲ್ಲಿಯೂ ಆಶ್ರಯವನ್ನು ಹೊಂದುವನು. **(ಜ್ಞಾನೋಕ್ತಿ** 14:32)

ನೀತಿವಂತನ ಮನೆಯಲ್ಲಿ ಮಹಾ ಐಶ್ವರ್ಯವಿರುತ್ತದೆ; ದುಷ್ಟನ ಆದಾಯದಲ್ಲಿ ತೊಂದರೆಯಿರುತ್ತದೆ. **(ಜ್ಞಾನೋಕ್ತಿ** 15:6)

ದುಷ್ಟರ ಯಜ್ಞವು ಯೆಹೋವನಿಗೆ ಅಸಹ್ಯ; ಆದರೆ ಯಥಾರ್ಥರ ಪ್ರಾರ್ಥನೆಯು ಆತನಿಗೆ ಆನಂದಕರವಾಗಿದೆ. **(ಜ್ಞಾನೋಕ್ತಿ** 15:8)

ಯೆಹೋವನ ನಾಮವು ಬಲವಾದ ದುರ್ಗ; ನೀತಿವಂತನು ಅದರೊಳಗೆ ಓಡಿ ಸುರಕ್ಷಿತವಾಗಿರುವನು. **(ಜ್ಞಾನೋಕ್ತಿ** 18:10)

ನೀತಿವಂತನು ನಿರ್ದೋಷಿಯಾಗಿ ನಡೆಯುತ್ತಾನೆ; ಆತನ ನಂತರ ಆತನ ಮಕ್ಕಳು ಧನ್ಯರಾಗಿರುವರು. **(ಜ್ಞಾನೋಕ್ತಿ** 20:7)

ನೀತಿವಂತನು ಏಳು ಸಾರಿ ಬಿದ್ದರೂ ಎದ್ದೇಳುವನು; ಆದರೆ ದುಷ್ಟರು ಕೇಡಿನಲ್ಲಿ ಬಿದ್ದುಕೊಳ್ಳುವರು. **(ಜ್ಞಾನೋಕ್ತಿ** 24:16)

ದುಷ್ಟನು ಯಾರೂ ಬೆನ್ನಟ್ಟದಿದ್ದರೂ ಓಡಿಹೋಗುತ್ತಾನೆ; ಆದರೆ ನೀತಿವಂತರು ಸಿಂಹದಂತೆ ಧೈರ್ಯವಾಗಿರುತ್ತಾರೆ **(ಜ್ಞಾನೋಕ್ತಿ** 28:1)

# ಕೀರ್ತನೆಗಳು

**Ps 5.12:** ಯೆಹೋವನೇ, ನೀನು ನೀತಿವಂತನನ್ನು ಆಶೀರ್ವದಿಸುತ್ತಿ; ಗುರಾಣಿಯಿಂದ ರಕ್ಷಿಸುವಂತೆ ನಿನ್ನ ಅನುಗ್ರಹದಿಂದ ಅವನನ್ನು ಮರೆಮಾಡುತ್ತಿ**. (ಕೀರ್ತನೆ 5:12)**

**Ps 14.5:** ಅಲ್ಲಿ ಅವರು ಮಹಾ ಭಯಕ್ಕೆ ಒಳಗಾದರು; ಏಕೆಂದರೆ ದೇವರು ನೀತಿವಂತರ ಸಂತತಿಯ ಸಂಗಡ ಇದ್ದಾನೆ. **(ಕೀರ್ತನೆ 14:5)**

**Ps 34.15:** ಯೆಹೋವನ ಕಣ್ಣುಗಳು ನೀತಿವಂತರ ಮೇಲಿವೆ; ಆತನ ಕಿವಿಗಳು ಅವರ ಮೊರೆಗೆ ತೆರೆದಿವೆ **. (ಕೀರ್ತನೆ 34:15)**

**Ps 34.17:** ನೀತಿವಂತರು ಮೊರೆಯಿಡಲು, ಯೆಹೋವನು ಕೇಳುತ್ತಾನೆ ಮತ್ತು ಅವರನ್ನು ಎಲ್ಲಾ ಸಂಕಟಗಳಿಂದ ಬಿಡಿಸುತ್ತಾನೆ. **(ಕೀರ್ತನೆ 34:17)**

**Ps 34.19:** ನೀತಿವಂತನಿಗೆ ಅನೇಕ ಕಷ್ಟಗಳಿರುತ್ತವೆ; ಆದರೆ ಯೆಹೋವನು ಅವೆಲ್ಲವುಗಳಿಂದ ಅವನನ್ನು ತಪ್ಪಿಸುತ್ತಾನೆ.**(ಕೀರ್ತನೆ 34:19)**

**Ps 37.17:** ದುಷ್ಟರ ತೋಳುಗಳು ಮುರಿಯಲ್ಪಡುವವು; ಆದರೆ ಯೆಹೋವನು ನೀತಿವಂತರನ್ನು ಉದ್ಧಾರ ಮಾಡುತ್ತಾನೆ. **(ಕೀರ್ತನೆ 37:17)**

**Ps 37.29:** ನೀತಿವಂತರು ದೇಶವನ್ನು ಸ್ವಾಧೀನಪಡಿಸಿಕೊಂಡು, ಅದರಲ್ಲಿ ಎಂದೆಂದಿಗೂ ವಾಸಿಸುವರು. **(ಕೀರ್ತನೆ 37:29)**

**Ps 55.22:** ನಿನ್ನ ಚಿಂತೆಯನ್ನು ಯೆಹೋವನ ಮೇಲೆ ಹಾಕು, ಆತನು ನಿನ್ನನ್ನು ಪೋಷಿಸುವನು; ಆತನು ನೀತಿವಂತನನ್ನು ಎಂದಿಗೂ ಕದಲಗೊಡಿಸನು. **(ಕೀರ್ತನೆ 55:22)**

**Ps 58.11:** ಆಗ ಮನುಷ್ಯನು, “ಖಂಡಿತವಾಗಿಯೂ ನೀತಿವಂತರಿಗೆ ಪ್ರತಿಫಲವಿದೆ; ಭೂಲೋಕದಲ್ಲಿ ನ್ಯಾಯತೀರಿಸುವ ದೇವರು ಒಬ್ಬನಿದ್ದಾನೆ” ಎಂದು ಹೇಳುವನು. **(ಕೀರ್ತನೆ 58:11)**

**Ps 75.10:** “ದುಷ್ಟರ ಕೊಂಬುಗಳನ್ನೆಲ್ಲಾ ಕಡಿದುಹಾಕುವೆನು; ಆದರೆ ನೀತಿವಂತರ ಕೊಂಬುಗಳು ಎತ್ತಲ್ಪಡುವುವು” ಎನ್ನುತ್ತಾನೆ. **(ಕೀರ್ತನೆ 75:10)**

**Ps 92.12:** ನೀತಿವಂತನು ಖರ್ಜೂರದ ಮರದಂತೆ ಚಿಗುರುವನು; ಲೆಬನೋನಿನ ದೇವದಾರು ಮರದಂತೆ ಬೆಳೆಯುವನು. **(ಕೀರ್ತನೆ 92:12)**

**Ps 97.11:** ನೀತಿವಂತರಿಗಾಗಿ ಬೆಳಕು ಬಿತ್ತಲ್ಪಟ್ಟಿದೆ, ಹೃದಯದಲ್ಲಿ ಯಥಾರ್ಥವಾಗಿರುವವರಿಗೆ ಆನಂದವು ಉಂಟಾಗಿದೆ. **(ಕೀರ್ತನೆ 97:11)**

**Ps 118.15:** ನೀತಿವಂತರ ಗುಡಾರಗಳಲ್ಲಿ ಜಯಘೋಷವೂ ರಕ್ಷಣೆಯ ಆನಂದವೂ ಇವೆ; ಯೆಹೋವನ ಬಲಗೈಯು ಪರಾಕ್ರಮವನ್ನು ತೋರಿಸಿದೆ. **(ಕೀರ್ತನೆ 118:15)**

**Ps 146.8:** ಯೆಹೋವನು ಕುರುಡರಿಗೆ ದೃಷ್ಟಿಯನ್ನು ಕೊಡುತ್ತಾನೆ; ಯೆಹೋವನು ಬಗ್ಗಿಬಿದ್ದವರನ್ನು ಎತ್ತುತ್ತಾನೆ; ಯೆಹೋವನು ನೀತಿವಂತನನ್ನು ಪ್ರೀತಿಸುತ್ತಾನೆ. **(ಕೀರ್ತನೆ 146:8)**

**Isa 3.10:** “ನೀತಿವಂತನಿಗೆ ಒಳಿತಾಗುವುದು” ಎಂದು ಹೇಳಿರಿ; ಏಕೆಂದರೆ ಅವರು ತಮ್ಮ ನಡತೆಯ ಫಲವನ್ನು ಅನುಭವಿಸುವರು. **(ಯೆಶಾಯ 3:10)**

**Hab 2.4:** ಇಗೋ, ದುರಂಕಾರಿಯಾದವನ ಮನಸ್ಸು ನೆಟ್ಟಗಿಲ್ಲ; ಆದರೆ ನೀತಿವಂತನು ತನ್ನ ನಂಬಿಕೆಯಿಂದ ಬದುಕುವನು. **(ಹಬಕ್ಕೂಕನು 2:4)**